1999–2000	:	ರೂ. 800.67 ಲಕ್ಷಗಳು
2000–2001	:	ರೂ. 896.42 ಲಕ್ಷಗಳು
2001–2002	:	ರೂ. 869.42 ಲಕ್ಷಗಳು

ರಾಜ್ಯದಲ್ಲಿ ಗುಣಮಟ್ಟದ ರೇಷ್ಮೆ ಉತ್ಪಾದನೆ

4596 (5342) : ಶ್ರೀ ಬೆಲ್ಲದ್ ಚಂದ್ರಕಾಂತ ಗುರಪ್ಪ (ಧಾರವಾಡ) ಮಾನ್ಯ ರೇಷ್ಮೆ ಮತ್ತು ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಚೀನಾದಿಂದ ಆಮದು ಆಗುವ ರೇಷ್ಮೆ ಪ್ರಮಾಣ ಎಷ್ಟು? ಅದರ ಅವಶ್ಯಕತೆ ರಾಜ್ಯದ ಜವಳಿ ಉದ್ದಿಮೆಗೆ ಇದೆಯೇ?

ಆ) ರಾಜ್ಯದಲ್ಲಿ ಜವಳಿ ಉದ್ದಿಮೆಗೆ ಬೇಕಾದ ಗುಣಮಟ್ಟದ ರೇಷ್ಮೆಯನ್ನು ಉತ್ಪಾದಿಸಲು ನಡೆದ ಸಂಶೋಧನೆ ಅಥವಾ ರೈತರ ಹೊಲದಲ್ಲಿ ನಡೆದ ಪ್ರಾತ್ಯಕ್ಷಿಕೆಗಳ ವಿವರ ಒದಗಿಸುವುದು;

ಇ) ರೇಷ್ಮೆ ಉದ್ಯಮದಲ್ಲಿ ಚಿಕ್ಕ ರೈತರಿಗೆ ಪ್ರೋತ್ಸಾಹಿಸಲು ಕೈಗೊಂಡಿರುವ ಯೋಜನೆಗಳ ವಿವರ ನೀಡುವುದು;

ಶ್ರೀ ಹೆಚ್.ಎಂ. ರೇವಣ್ಣ (ರೇಷ್ಮೆ ಮತ್ತು ಜವಳಿ ಸಚಿವರು)

ಅ) 2002–03ನೇ ಸಾಲಿನಲ್ಲಿ ಚೀನಾ ದೇಶದಿಂದ 7048 ಮೆ.ಟನ್ ಕಚ್ಚಾ ರೇಷ್ಮೆ ಆಮದಾಗಿದೆ. ಹೌದು

ಆ) ಆ ಕುರಿತಂತೆ ಈ ಕೆಳಗಿನ ಕ್ರಮಗಳನ್ನು ಕೈಗೊಳ್ಳಲಾಗಿದೆ :–

(1) ದ್ವಿತಳಿಗಳ ಕುರಿತಂತೆ ಎನ್.ಪಿ. 2, ಕೆ.ಎಸ್.ಒ 1, ಸಿಟಿಎಂ, ಎನ್‌ಟಿಸಿಎಂ ಸಿಎಸ್‌ಆರ್ ಹಾಗೂ ಬಹುಸಂತತಿ ಕುರಿತಂತೆ ಎಂ.ಹೆಚ್1, ಬಿಲ್ ಇವುಗಳನ್ನು ಬಿಡುಗಡೆ ಮಾಡಲಾಗಿದೆ.

(2) ಅಂತರರಾಷ್ಟ್ರೀಯ ಗುಣಮಟ್ಟದ ರೇಷ್ಮೆ ಉತ್ಪಾದನೆಗೆ ಮಲ್ಟಿ ಎಂಡ್ ಘಟಕಗಳ ಸ್ಥಾಪನೆಗೆ ಸಹಾಯಧನ ನೀಡಿ ಪ್ರೋತ್ಸಾಹಿಸಲಾಗುತ್ತಿದೆ.

(3) ಹೊಸ ತಾಂತ್ರಿಕತೆ ಅಳವಡಿಸುವ ಕುರಿತಂತೆ ರೇಷ್ಮೆ ಬೆಳೆಗಾರರು/ರೀಲರುಗಳಿಗೆ ತಿಳುವಳಿಕೆ/ತರಬೇತಿ ನೀಡಲಾಗುತ್ತಿದೆ.

(4) ರೈತರ ಹೊಲಗಳಲ್ಲಿ ಪ್ರಾತ್ಯಕ್ಷತೆ ಹಾಗೂ ಕಾರ್ಯಾಗಾರಗಳನ್ನು ನಡೆಸಲಾಗಿದೆ.

ಇ) ಈ ಕೆಳಗಿನ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

(1) ಹಿಪ್ಪುನೇರಳೆ ಕೃಷಿ, ಹುಳುಸಾಕಣೆ ಸಲಕರಣೆಗಳ ಖರೀದಿ ಹಾಗೂ ಹುಳು ಸಾಕಣೆ ಮನೆ ನಿರ್ಮಾಣಕ್ಕೆ ವಾಣಿಜ್ಯ ಬ್ಯಾಂಕುಗಳ ಮೂಲಕ ಸಾಲಸೌಲಭ್ಯ ಒದಗಿಸಲಾಗುತ್ತಿದೆ.

(2) ಸುಧಾರಿತ ಹಿಪ್ಪುನೇರಳೆ ತಳಿಗಳ ಸಸಿಗಳನ್ನು ಬೆಳೆಸಿ ವಿತರಿಸಲಾಗುತ್ತಿದೆ.

(3) ಹೊಸ ಪ್ರದೇಶಗಳಲ್ಲಿ ಉತ್ಪಾದಿಸಿ ಮಾರುಕಟ್ಟೆಗಳಲ್ಲಿ ಮಾರಾಟವಾದ ಪ್ರತಿ ಕೆ.ಜಿ. ರೇಷ್ಮೆ ಗೂಡಿಗೆ ರೂ. 5ರ ಪ್ರೋತ್ಸಾಹಧನ ನೀಡಲಾಗುತ್ತಿದೆ.

(4) ಹನಿ ನೀರಾವರಿ ಪದ್ಧತಿ ಅಳವಡಿಕೆ ಮತ್ತು ಹುಳು ಸಾಕಣೆ ಮನೆ ನಿರ್ಮಾಣ ಕುರಿತಂತೆ ಸಹಾಯಧನ ನೀಡಲಾಗುತ್ತಿದೆ.

(5) ಬಿತ್ತನೆ ಪ್ರದೇಶಗಳಲ್ಲಿ ಉಚಿತ ಸೋಂಕು ನಿವಾರಣೆ ಕೈಗೊಳ್ಳಲಾಗುತ್ತಿದೆ.

(6) ದ್ವಿತಳಿ ಬಿತ್ತನೆ ಪ್ರದೇಶಗಳಲ್ಲಿ ಬೆಳೆಯ ಬಿತ್ತನೆಗೆ ಯೋಗ್ಯವಾದ ಎಲ್ಲಾ ಗೂಡುಗಳಿಗೆ ಬಿತ್ತನೆ ದರ ಒದಗಿಸಲಾಗುತ್ತಿದೆ. ಮೈಸೂರು ಬಿತ್ತನೆ ವಲಯದಲ್ಲಿ ಬೆಳೆದ ಗೂಡು ನೂಲು ಬಿಚ್ಚಾಣಿಕೆಗೆ ವಿಲೇವಾರಿಯಾದಲ್ಲಿ ಪ್ರತಿ ಕೆ.ಜಿ.ಗೆ. ರೂ. 40/– ರ ಬೋನಸ್ ನೀಡಲಾಗುತ್ತಿದೆ.

ರಾಜ್ಯದಲ್ಲಿ ಪಶು ವೈದ್ಯರುಗಳ ಕೊರತೆ

4597 (5343) : ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ) ಮಾನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಪಶುವೈದ್ಯಕೀಯ ವೈದರುಗಳ ಕೊರತೆ ಇರುವುದು ನಿಜವಲ್ಲವೇ; ಎಷ್ಟು ಕೊರತೆ ಇದೆ;

ಆ) ರಾಜ್ಯದಲ್ಲಿರುವ ಪಶುಚಿಕಿತ್ಸಾಲಯಗಳ ತಾಲ್ಲೂಕುವಾರು ವಿವರ ನೀಡುವುದು; ಈ ಚಿಕಿತ್ಸಾಲಯಗಳಲ್ಲಿ ವೈದ್ಯರುಗಳು ಇಲ್ಲದೆ ಇರುವ ಆಸ್ಪತ್ರೆಗಳ ವಿವರ ನೀಡುವುದು;

ಇ) ಪಶುವೈದ್ಯ ಚಿಕಿತ್ಸಾಲಯಗಳಲ್ಲಿ ಜಾನುವಾರುಗಳಿಗೆ ಚಿಕಿತ್ಸೆ ನೀಡಲು ಸಾಗಾಟದ ವಾಹನಗಳ ಸೌಲಭ್ಯ ನೀಡಲಾಗಿದೆಯೇ; ವಿವರ ನೀಡುವುದು?

ಶ್ರೀ ಎಂ. ಮಹಾದೇವ್ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು)

ಅ) 978 ಪಶುವೈದ್ಯಾಧಿಕಾರಿಗಳ ಹುದ್ದೆಗಳು ಖಾಲಿ ಇವೆ. ಇದರಲ್ಲಿ 203 ಪಶುವೈದ್ಯಾಧಿಕಾರಿಗಳು ಗುತ್ತಿಗೆ ಆಧಾರದ ಮೇಲೆ ಕೆಲಸ ನಿರ್ವಹಿಸುತ್ತಿದ್ದಾರೆ.

ಆ) ಪಶುಚಿಕಿತ್ಸಾಲಯಗಳ ಹಾಗೂ ಈ ಚಿಕಿತ್ಸಾಲಯಗಳಲ್ಲಿ ಖಾಲಿ ಇರುವ ಪಶುವೈದ್ಯಾಧಿಕಾರಿಗಳ ತಾಲ್ಲೂಕುವಾರು ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ.

ಇ) ಪಶುಚಿಕಿತ್ಸಾಲಯಗಳಲ್ಲಿ ಜಾನುವಾರುಗಳಿಗೆ ಚಿಕಿತ್ಸೆ ನೀಡಲು ಸಾಗಾಟದ ವಾಹನ ಸೌಲಭ್ಯ ನೀಡಿರುವುದಿಲ್ಲ. ಆದರೆ ಬೆಂಗಳೂರು ಪೂರ್ವ, ಬಸವನಬಾಗೇವಾಡಿ, ಮುಧೋಳ ಮತ್ತು ಬಾದಾಮಿ ತಾಲ್ಲೂಕುಗಳನ್ನು ಹೊರತುಪಡಿಸಿ ಉಳಿದ ಎಲ್ಲಾ ತಾಲ್ಲೂಕುಗಳಲ್ಲಿ ಸಂಚಾರಿ ಪಶುಚಿಕಿತ್ಸಾಲಯಗಳ ಸೌಲಭ್ಯವಿರುತ್ತದೆ.

ರಾಜ್ಯದಲ್ಲಿ ಪಶುಚಿಕಿತ್ಸಾಲಯಗಳಲ್ಲಿ ಖಾಲಿ ಇರುವ ಪಶುವೈದ್ಯಾಧಿಕಾರಿಗಳ ತಾಲ್ಲೂಕುವಾರು ವಿವರಗಳು

ಪ್ರಶ್ನೆ ಸಂಖ್ಯೆ: (ಅನುಬಂಧ – 1) ತಾಲ್ಲೂಕು ಪಶುಚಿಕಿತ್ಸಾಲಯಗಳ ವಿವರಗಳು

ಕ್ರ.ಸಂ.	ತಾಲ್ಲೂಕು	ಪ.ಷಿ.	ಪಶುವೈದ್ಯಾಧಿಕಾರಿಗಳ ಖಾಲಿ ಹುದ್ದೆಗಳು	ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವವರು
1.	ಬೆಂಗಳೂರು ದಕ್ಷಿಣ	10	–	–
2.	ಬೆಂಗಳೂರು ಉತ್ತರ	17	–	1
3.	ಬೆಂಗಳೂರು ಪೂರ್ವ	18	–	–
4.	ಆನೇಕಲ್	7	–	–
	ಒಟ್ಟು	52	–	1